

## ಲಾಲಿತ್ಯ ಬೇಕು, ಕಸರತ್ತು ಸಾಕು

ಝೀ ಕನ್ನಡದಲ್ಲಿ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಮತ್ತೆ ಆರಂಭವಾಗಿದೆ. ಆದರೆ ಹಳೆಯ ಧೋರಣೆಯ ಪುನರಾವರ್ತನೆ ಆದಂತೆ ಕಾಣಿಸುತ್ತಿದೆ. ಡ್ಯಾನ್ಸ್ ಎಂದು ಎತ್ತರಕ್ಕೆ ನೆಗೆದು ಕೆಳಗೆ ಬೀಳುವುದು, ಹೆಣ್ಣುಮಕ್ಕಳನ್ನು ಮೇಲಕ್ಕೆ ಎಸೆಯುವುದು, ಕೂದಲು ಹಿಡಿದು ಎಳೆಯುವುದು ಇದರಲ್ಲಿ ಸಾಮಾನ್ಯವಾಗಿದೆ. ಇದನ್ನು ತೀರ್ಪುಗಾರರು ಆಶ್ಚರ್ಯ, ಭೀತಿ ವ್ಯಕ್ತಪಡಿಸಿ ಕೇಕೆ ಹಾಕುತ್ತಾರೆ. ಡಾನ್ಸ್ ಹೆಸರಿನಲ್ಲಿ ಮಾಡುವುದೆಲ್ಲ ಸರ್ಕಸ್ ಪಟ್ಟುಗಳು. ಇದು ಬದಲಾಗಬೇಕಾಗಿರುವುದು ಅವಶ್ಯ.

—ಭಾರತೀ ಗಂಗಾಧರ್, ಬೆಂಗಳೂರು

## ವಾರದ ಪತ್ರ

### 2000 ರೂಪಾಯಿ: ಯಾರಿಗೆ ಶಾಕ್?

ಎರಡು ಸಾವಿರ ಮುಖಬೆಲೆಯ ನೋಟುಗಳನ್ನು ರಿಸರ್ವ್ ಬ್ಯಾಂಕ್ ಚಲಾವಣೆಯಿಂದ ಹಿಂದಕ್ಕೆ ಪಡೆದಿದೆ. ಅವುಗಳ ವಿನಿಮಯಕ್ಕೆ ನಿರ್ದಿಷ್ಟ ಕಾಲಾವಧಿಯನ್ನೂ ನೀಡಲಾಗಿದೆ. ಸದ್ಯ ಆ ನೋಟುಗಳ ಚಲಾವಣೆ ಪ್ರಮಾಣವೂ ಕಡಿಮೆ. ಎಟಿಎಂ ಕೇಂದ್ರಗಳಲ್ಲೂ ಸುಮಾರು ದಿನಗಳಿಂದ 2000 ರೂಪಾಯಿ ಮುಖಬೆಲೆಯ ನೋಟುಗಳು ಬರುವುದಿಲ್ಲ. ಮಧ್ಯಮವರ್ಗ ಹಾಗೂ ಕೆಳಮಧ್ಯಮ ವರ್ಗದವರಿಗೆ ಇದರಿಂದ ಯಾವ ತೊಂದರೆಯೂ ಇಲ್ಲ. ಅಷ್ಟಕ್ಕೂ ಆ ನೋಟುಗಳು ಏನಾದರೂ ಇದ್ದರೆ ದಿನಕ್ಕೆ 20 ಸಾವಿರದಂತೆ ಆರಾಮವಾಗಿ ಬದಲಾಯಿಸಿಕೊಳ್ಳಬಹುದು. ಆದರೆ ನಮ್ಮ ಕನ್ನಡ ಸುದ್ದಿ ಮಾಧ್ಯಮಗಳು ಜನರಿಗೆ 'ಬಿಗ್ ಶಾಕ್' ಎಂಬ ಪದಗಳನ್ನು ಬಳಸಿ ಹೆದರಿಸುವ ಕೆಲಸ ಮಾಡುತ್ತಿವೆ.

—ಮುರಲೀಧರ ಕುಲಕರ್ಣಿ, ಬೀದರ್

## ದ್ವಂದ್ವಾರ್ಥಕ್ಕೆ ಕಡಿವಾಣ ಬೀಳಲಿ

ಕಲರ್ಸ್ ಕನ್ನಡದ 'ಗಿಚ್ಚಿ ಗಿಲಿ ಗಿಲಿ' ರಿಯಾಲಿಟಿ ಶೋನಲ್ಲಿ ದ್ವಂದ್ವಾರ್ಥ ಇಲ್ಲದ ಸ್ಕಿಟ್ ಇರುವುದೇ ಇಲ್ಲ. ಜೊತೆಗೆ ಒದೆತ, ಹೊಡೆತ ಇವೆಲ್ಲ ಮಾಮೂಲು. ಅಲ್ಲಿ ಚಿಕ್ಕ ಮಕ್ಕಳೂ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಹೊಡೆದಾಟ ಬಡಿದಾಟಗಳ ನಡುವೆ ಕುಡಿತದ ದೃಶ್ಯಗಳನ್ನು ನೋಡಿ ಪ್ರೇಕ್ಷಕರ ಸಾಲಿನಲ್ಲಿ ಕುಳಿತವರು ನಗುತ್ತಾರೆ. ಅವರ ಜೊತೆ ತೀರ್ಪುಗಾರರು ಮತ್ತು ಸಹನಟರು ನಕ್ಕರೆ ಸಾಕೇ? ವೀಕ್ಷಕರು ಅದಕ್ಕೆ ನಗುತ್ತಾರೋ ವಾಕರಿಕೆ ತೋರಿಸುತ್ತಾರೋ ಎನ್ನುವುದನ್ನು ಪರಿಶೀಲಿಸಬೇಕು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## 'ಯುಗಾಂತರ' ಅವಸರದ ಅಂತ್ಯ

ಸಿರಿ ಕನ್ನಡದ 'ಯುಗಾಂತರ' 'ಯುಗಾಂತರ' ವಿಭಿನ್ನವಾಗಿತ್ತು. ಅದು ಭ್ರಷ್ಟ ರಾಜಕಾರಣಿಗಳ ತಂತ್ರ ಕುತಂತ್ರಗಳನ್ನು ಪದರಪದರವಾಗಿ ಬಿಚ್ಚಿಟ್ಟಿದೆ. ಗಟ್ಟಿ ಸಂಭಾಷಣೆ, ಉತ್ತಮ ಅಭಿನಯದಿಂದ ರಂಜಿಸಿದ ಇದರಲ್ಲಿ ಅರುಂಧತಿಯ ಪಾತ್ರ ಸೊಗಸಾಗಿತ್ತು. ವಾಸ್ತವಿಕ ಕಥೆ ಬೇಗ ಮುಗಿದಿದ್ದರಿಂದ ಬೇಸರವಾಯಿತು.

—ವಿಜಯಾ ಪ್ರಸಾದ್, ಬೆಂಗಳೂರು

## ಮಂಗಳ ಹಾಡಿದ ರಾಧಾ-ಕೃಷ್ಣ ರಮ್ಯಗೀತೆ

ಸ್ಟಾರ್ ಸುವರ್ಣದಲ್ಲಿ 'ರಾಧಾ ಕೃಷ್ಣ' ಡಬ್ಬಿಂಗ್ ಧಾರಾವಾಹಿ ನಮ್ಮೆಲ್ಲರ ಮನಸ್ಸನ್ನು ಗೆದ್ದಿತ್ತು. ಸುಮೇದ್ ಮುದ್ಗಲ್ಕರ್ (ಕೃಷ್ಣ) ಹಾಗೂ ಮಲ್ಲಿಕಾ ಸಿಂಗ್ (ರಾಧಾ) ನಟನೆ ಅಮೋಘವಾಗಿತ್ತು. ಇದೀಗ ಆ ಧಾರಾವಾಹಿ ಮುಗಿದಿದ್ದು ಬೇಸರ ತರಿಸಿದೆ. ಈ ಧಾರಾವಾಹಿ ಸುಮಾರು 900ಕ್ಕೂ ಹೆಚ್ಚಿನ ಸಂಚಿಕೆಗಳನ್ನು ಪೂರೈಸಿದೆ. ಇಂತಹ ಪೌರಾಣಿಕ ಪರಿಕಲ್ಪನೆಯ ಧಾರಾವಾಹಿಗಳು ಮುಂದೆಯೂ ಮೂಡಿ ಬರುತ್ತಿರಲಿ.

—ಅನುಪಮಾ, ಮಂಗಳೂರು

## 'ಸುದ್ದಿರಾಕ್ಷಸರು' ಎನ್ನಬಹುದೇ?

ಬೆಂಗಳೂರಿನಲ್ಲಿ ಸುರಿದ ಮಳೆ ಹವಾಮಾನ ವೈಪರೀತ್ಯದಿಂದ ಸಂಭವಿಸಿದ ಘಟನೆ. ಇದನ್ನು ಕನ್ನಡ ಸುದ್ದಿವಾಹಿನಿಗಳು ವರುಣ ರಕ್ಕಸ, ಜಲರಾಕ್ಷಸ, ರಾಕ್ಷಸಮಳೆ ಎಂದು ಪ್ರಕೃತಿಯನ್ನು ಜರಿದವು! ನೀರು ಹರಿಯುವ ಜಾಗವನ್ನು ಅತಿಕ್ರಮಿಸಿರುವವರನ್ನು ಭೂರಾಕ್ಷಸ ಎಂದು ಕರೆಯುವ ಬದಲಾಗಿ – ವರುಣದೇವನನ್ನು, ಮಳೆನೀರನ್ನು ರಕ್ಕಸ, ರಾಕ್ಷಸ ವಿಶೇಷಣ ಹಚ್ಚಿ ಜರಿಯುವವರನ್ನು 'ಸುದ್ದಿರಾಕ್ಷಸರು' ಎಂದು ಕರೆಯಬಹುದಲ್ಲವೇ?

—ಪಿ.ಜೆ. ರಾಘವೇಂದ್ರ, ಮೈಸೂರು

## ಈಡುಜೋಡು ಯದ್ವಾತದ್ವಾ...

ಝಿ ಕನ್ನಡದ 'ಗಟ್ಟಿಮೇಳ'ದಲ್ಲಿ ಧ್ರುವ ಆರು ಅಡಿ, ಅದಿತಿ ನಾಲ್ಕು ಅಡಿ – ಇವರಿಬ್ಬರೂ ದಂಪತಿ ಆಗುತ್ತಿದ್ದಾರೆ. ನೋಡಿದರೆ ಅದು ಹೊಂದಾಣಿಕೆಯ ಜೋಡಿ ಅಲ್ಲ. ಇಂತಹ ಸೂಕ್ಷ್ಮ ಸಂಗತಿಗಳನ್ನೂ ಗಮನಿಸಿ ಪಾತ್ರಧಾರಿಗಳನ್ನು ಆಯ್ಕೆ ಮಾಡಬೇಕು.

—ಎಸ್.ಆರ್. ಚಿಕ್ಕಣ್ಣ, ಬೆಂಗಳೂರು

## ನಗೆಯ ಮರುಕಳಿಕೆ ಹಿತಕರ

ಕಲರ್ಸ್ ಕನ್ನಡದ 'ಮಜಾ ಟಾಕೀಸ್' ಮತ್ತು ಮರುಪ್ರಸಾರವಾಗುತ್ತಿರುವ 'ಪಾಪ ಪಾಂಡು', 'ಸಿಲ್ಲಿ ಲಲ್ಲಿ' ನೋಡಲು ಮಜವೆನಿಸುತ್ತದೆ. 'ಮಜಾಭಾರತ'ವಂತೂ ನೋಡುಗರನ್ನು ಮೋಡಿ ಮಾಡಿದೆ ಎಂದೇ ಹೇಳಬಹುದು. ವಾರಾಂತ್ಯದ 'ಗಿಚ್ಚಿ ಗಿಲಿಗಿಲಿ' ಕೂಡ ಅದ್ಭುತವಾಗಿ ಮೂಡಿಬರುತ್ತಿದೆ.

—ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

## ಬಂದವರಿಗೆ ನೀರು ಕೊಡಿ

ಮರಾಠಿ ಮೂಲದ ಬಾಳುಮಾಮಾ ಬದುಕನ್ನು ಆಧರಿಸಿದ ಕಲರ್ಸ್ ಕನ್ನಡದ 'ಪವಾಡ ಪುರುಷ' ಧಾರಾವಾಹಿಯಲ್ಲಿ ಮನೆಗೆ ಆಗಮಿಸಿದ ಅತಿಥಿಗಳಿಗೆ ಕುಡಿಯಲು ನೀರು ಕೊಡುತ್ತಾರೆ. ಅದನ್ನು ನೋಡಿದ ತಕ್ಷಣ ಮನೆಗೆ ಬಂದವರಿಗೆ ಕುಡಿಯಲು ನೀರು ಕೊಡುವ ಪದ್ಧತಿ ನೆನಪಿಗೆ ಬಂತು. ಈ ಸನ್ನಿವೇಶವನ್ನು ನೋಡಿ ಖುಷಿ ಅನಿಸಿತು. ಮನೆಗೆ ಯಾರೇ ಬಂದರೂ ನಮ್ಮ ಅಜ್ಜಿ ಬೆಲ್ಲದ ತುಂಡು ಮತ್ತು ನೀರು ಕೊಡಲು ಹೇಳುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಕೆಲವರು ಈ ಸಂಪ್ರದಾಯ ಪಾಲಿಸುವುದನ್ನು ಮರೆತಿದ್ದಾರೆ.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಸುಂದರ ನೆನಪುಗಳ 'ಡಾಕ್ಟರ್ ಸವಿರುಚಿ'



ಕಲರ್ಸ್‌ನ 'ಸವಿರುಚಿ' ಕಾರ್ಯಕ್ರಮದಲ್ಲಿ ನಾರಾಯಣ ನೇತ್ರಾಲಯದ ಖ್ಯಾತ ವೈದ್ಯ ಡಾ. ಭುಜಂಗ ಶೆಟ್ಟಿ ಅವರು ಆರೋಗ್ಯಕರ ಮತ್ತು ರುಚಿಕಟ್ಟಾದ ಖಾದ್ಯಗಳನ್ನು ಹಲವು ಸಂಚಿಕೆಗಳಲ್ಲಿ ವೀಕ್ಷಕರಿಗೆ ಉಣಬಡಿಸಿದ ರೀತಿಯೇ ಭಿನ್ನ. ಅವರ ನಗುಮುಖದ ಸಲಹೆಗಳು ಅತ್ಯಂತ ಉಪಯುಕ್ತವಾಗಿದ್ದವು. ಅವರ ಅನಿರೀಕ್ಷಿತ ನಿಧನದ ಸುದ್ದಿಯನ್ನು ಇಂದಿಗೂ ಅರಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ದಿನಗಳಲ್ಲಿ ಸವಿರುಚಿ ಸರಣಿಯನ್ನು ನೋಡುವಾಗ ಅವರ ಗೈರುಹಾಜರಿ ಕಾಡುತ್ತಿದೆ. 'ಸವಿರುಚಿ' ತಂಡಕ್ಕೆ ವಂದನೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು